# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2409
ಮಾನ್ಯ ಸದಸ್ಯರ ಹೆಸರು : ಶ್ರೀ ಕೆ.ಅಬ್ದುಲ್ ಜಬ್ಬರ್
ಉತ್ತರಿಸುವ ದಿನಾಂಕ : 27.03.2026
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಸಮಾಜ ಕಲ್ಯಾಣ ಇಲಾಖೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಿದ್ಯಾರ್ಥಿ ನಿಲಯಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ಒದಗಿಸುವುದು) | ರಾಜ್ಯದಲ್ಲಿ ಸಮಾಜ ಕಲ್ಯಾಣ ಇಲಾಖೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಿದ್ಯಾರ್ಥಿ ನಿಲಯಗಳ ಒಟ್ಟು ಸಂಖ್ಯೆ 2005. ಜಿಲ್ಲಾವಾರು ಮಾಹಿತಿಯನ್ನು ಅನುಬಂಧ – 1ರಲ್ಲಿ ನೀಡಲಾಗಿದೆ. |
| ಆ) | ವಿದ್ಯಾರ್ಥಿ ನಿಲಯಗಳಲ್ಲಿ ನೀರು, ವಿದ್ಯುತ್ ಶೌಚಾಲಯ ಹಾಗೂ ಇನ್ನಿತರೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಕಾರ್ಯ ಹೇಗೆ ನಡೆಯುತ್ತಿದೆ; | ವಿದ್ಯಾರ್ಥಿನಿಲಯಗಳಲ್ಲಿನ ನೀರು, ವಿದ್ಯುತ್, ಶೌಚಾಲಯ ಹಾಗೂ ಇನ್ನಿತರ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ಸಂಬಂಧ ವಿದ್ಯಾರ್ಥಿನಿಲಯಗಳ ನಿರ್ವಹಣೆ ತಾಲ್ಲೂಕು ಪಂಚಾಯತ್ ಲೆಕ್ಕಶೀರ್ಷಿಕೆ:2225-00-101-0-61 ಹಾಗೂ ಜಿಲ್ಲಾಪಂಚಾಯತ್ ಲೆಕ್ಕಶೀರ್ಷಿಕೆ:2225-00-101-0-29 ರಡಿ ವಾರ್ಷಿಕ ನಿಗಧಿಗೊಳಿಸುವ ಅನುದಾನದಡಿ ವೆಚ್ಚಭರಿಸಲಾಗುತ್ತಿದೆ.<br><br>ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ಸಂಬಂಧ ರಾಜ್ಯವಲಯದಿಂದ ನಿಲಯಗಳಿಗೆ ಅಗತ್ಯವಿರುವ ಸಾಮಗ್ರಿಗಳಾದ ಟೂ ಟಯರ್ ಕಾಟ್, ಸೋಲಾರ್ ವಾಟರ್ ಹೀಟರ್, ಡೈನಿಂಗ್ ಟೇಬಲ್, ಡೀಸೆಲ್ ಜನರೇಟರ್, ಕಾಯರ್ ಮ್ಯಾಟ್ರಸ್ ಮತ್ತು ಪಿಲ್ಲೋ, ಸಿಸಿಟಿವಿ ಕ್ಯಾಮರಾಗಳನ್ನು ಅನುದಾನದ ಲಭ್ಯತೆಯಾನುಸಾರ ನಿಯಮಾವಳಿಗಳನ್ವಯ ಇ-ಟೆಂಡರ್ ಮೂಲಕ ಖರೀದಿಸಿ ಪೂರೈಸಲಾಗುತ್ತಿದೆ. |
| ಇ) | ಕಳೆದ ಮೂರು ವರ್ಷಗಳಲ್ಲಿ ವಿದ್ಯಾರ್ಥಿ ನಿಲಯಗಳಿಗೆ ಒದಗಿಸುತ್ತಿರುವ ಮೂಲಭೂತ ಸೌಕರ್ಯಗಳಲ್ಲಿ ಯಾವ ರೀತಿಯ ಬದಲಾವಣೆಗಳನ್ನು ತರಲಾಗಿದೆ; | ಇಲಾಖೆಯ ವಿದ್ಯಾರ್ಥಿ ನಿಲುಯಗಳಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ಸಂಬಂಧ ರಾಜ್ಯವಲಯದಿಂದ ನಿಲಯಗಳಿಗೆ ಅಗತ್ಯವಿರುವ ಸಾಮಗ್ರಿಗಳಾದ ಟೂ ಟಯರ್ ಕಾಟ್, ಸೋಲಾರ್ ವಾಟರ್ ಹೀಟರ್, ಡೈನಿಂಗ್ ಟೇಬಲ್, ಡೀಸೆಲ್ ಜನರೇಟರ್, ಕಾಯರ್ ಮ್ಯಾಟ್ರಸ್ ಮತ್ತು ಪಿಲ್ಲೋ, ಸಿಸಿಟಿವಿ ಕ್ಯಾಮರಾಗಳನ್ನು ಕೆಟಿಪಿಪಿ ನಿಯಮಾವಳಿಗಳನ್ವಯ ಇ-ಟೆಂಡರ್ ಮೂಲಕ ಖರೀದಿಸಿ ಪೂರೈಸಲಾಗುತ್ತಿದೆ. ಅದರಂತೆ ಕಳೆದ ಮೂರು ವರ್ಷಗಳಲ್ಲಿ ರಾಜ್ಯ ವಲಯದಿಂದ ಮೂಲಭೂತ ಸೌಕರ್ಯಗಳನ್ನು ಪೂರೈಸಲಾಗಿದ್ದು, ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಗೆ ಪೂರಕ ವಾತಾವರಣ ಕಲ್ಪಿಸಲಾಗಿದೆ. |

---2

**ಈ)** ಕಳೆದ ಮೂರು ವರ್ಷಗಳಲ್ಲಿ ಎಷ್ಟು ಹೊಸ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಲಾಗದೆ; ಮುಂದಿನ ದಿನಗಳಲ್ಲಿ ಎಷ್ಟು ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸುವ ಗುರಿ ಹೊಂದಲಾಗಿದೆ? (ಸಂಪೂರ್ಣ ಮಾಹಿತಿ ಒದಗಿಸುವುದು)

ಕಳೆದ ಮೂರು ವರ್ಷಗಳಲ್ಲಿ ಕೆಳಕಂಡಂತೆ ಹೊಸ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡಲಾಗಿದೆ.

| **ಕ್ರ. ಸಂ** | **ವರ್ಷ** | **ವಿದ್ಯಾರ್ಥಿ ನಿಲಯವಾರು ವಿವರ** | **ಮಂಜೂರಾದ ವಿದ್ಯಾರ್ಥಿನಿಲಯಗಳ ಸಂಖ್ಯೆ** |
|---|---|---|---|
| 1 | 2022-23 | ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು | - |
| 2 | 2023-24 | ದೀನ ದಯಾಳ್ ಉಪಾಧ್ಯಾಯ ವಿದ್ಯಾರ್ಥಿ ನಿಲಯಗಳು | 4 |
| 3 | 2024-25 | ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು | 31 |

2026-27ನೇ ಸಾಲಿನ ಆಯವ್ಯಯ ಕಂಡಿಕೆ-182 ರಲ್ಲಿ "ಶೈಕ್ಷಣಿಕವಾಗಿ ಪ್ರಮುಖ ನಗರಗಳಲ್ಲಿ ವಿದ್ಯಾರ್ಥಿನಿಲಯಗಳಿಗೆ ಬೇಡಿಕೆ ಹೆಚ್ಚುತ್ತಿರುವ ಕಾರಣ ಪ್ರತಿ ಜಿಲ್ಲೆಗೆ 150 ಸಂಖ್ಯಾಬಲದ ಒಂದು ಬಾಲಕರ ಮತ್ತು ಬಾಲಕಿಯರ ಒಟ್ಟು 62 ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲಾಗುವುದಾಗಿ ಘೋಷಣೆಯಾಗಿರುತ್ತದೆ". ಅದರಂತೆ ಈ ಕುರಿತು ನಿಯಮಾನುಸಾರ ಪರಿಶೀಲಿಸಿ, ಬೇಡಿಕೆಗೆ ಅನುಗುಣವಾಗಿ ಹೊಸ ವಿದ್ಯಾರ್ಥಿನಿಲಯಗಳ ಮಂಜೂರಾತಿಗೆ ಪರಿಶೀಲಿಸಲಾಗುವುದು.

**ಸಕಇ 339 ಪಕವಿ 2026**

**(ಡಾ. ಹೆಚ್.ಸಿ. ಮಹದೇವಪ್ಪ)**
**ಸಮಾಜ ಕಲ್ಯಾಣ ಸಚಿವರು**

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ.ಶ್ರೀ ಕೆ. ಅಬ್ದುಲ್ ಜಬ್ಬರ್ ರವರ ಚುಕ್ಕೆಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ:2409 ಕ್ಕೆ
ಅನುಬಂಧ -1

| ಕ್ರ. ಸಂ | ಜಿಲ್ಲೆಯ ಹೆಸರು | ವಸತಿ ಶಾಲೆ | ಮೆಟ್ರಿಕ್ ಪೂರ್ವ ವಿ.ನಿಲಯಗಳು | | | ಮೆಟ್ರಿಕ್ ನಂತರ ವಿ.ನಿಲಯಗಳು | | | ದೀನದಯಾಳ್ ಉಪಾಧ್ಯಾಯ | | | ಒಟ್ಟು |
|---|---|---|---|---|---|---|---|---|---|---|---|---|
| | | | ಬಾಲಕ | ಬಾಲಕಿ | ಒಟ್ಟು | ಬಾಲಕ | ಬಾಲಕಿ | ಒಟ್ಟು | ಬಾಲಕ | ಬಾಲಕಿ | ಒಟ್ಟು | |
| 1 | ಬಾಗಲಕೋಟೆ | 3 | 33 | 11 | 44 | 15 | 10 | 25 | 0 | 0 | 0 | 72 |
| 2 | ಬಳ್ಳಾರಿ | 1 | 17 | 5 | 22 | 12 | 6 | 18 | 0 | 0 | 0 | 41 |
| 3 | ಬೆಳಗಾವಿ | 3 | 51 | 15 | 66 | 20 | 11 | 31 | 0 | 0 | 0 | 100 |
| 4 | ಬೆಂಗಳೂರು (ಗ್ರಾ) | 0 | 18 | 5 | 23 | 5 | 5 | 10 | 0 | 0 | 0 | 33 |
| 5 | ಬೆಂಗಳೂರು (ನ) | 2 | 10 | 3 | 13 | 24 | 23 | 47 | 0 | 0 | 0 | 62 |
| 6 | ಬೀದರ್ | 6 | 34 | 8 | 42 | 12 | 7 | 19 | 0 | 0 | 0 | 67 |
| 7 | ಚಾಮರಾಜನಗರ | 0 | 29 | 11 | 40 | 7 | 9 | 16 | 0 | 0 | 0 | 56 |
| 8 | ಚಿಕ್ಕಬಳ್ಳಾಪುರ | 1 | 39 | 10 | 49 | 15 | 8 | 23 | 0 | 0 | 0 | 73 |
| 9 | ಚಿಕ್ಕಮಗಳೂರು | 2 | 25 | 12 | 37 | 13 | 9 | 22 | 0 | 0 | 0 | 61 |
| 10 | ಚಿತ್ರದುರ್ಗ | 0 | 37 | 15 | 52 | 23 | 18 | 41 | 0 | 0 | 0 | 93 |
| 11 | ದಕ್ಷಿಣ ಕನ್ನಡ | 1 | 11 | 8 | 19 | 5 | 6 | 11 | 0 | 0 | 0 | 31 |
| 12 | ದಾವಣಗೆರೆ | 0 | 29 | 9 | 38 | 18 | 12 | 30 | 0 | 0 | 0 | 68 |
| 13 | ಧಾರವಾಡ | 1 | 9 | 5 | 14 | 14 | 7 | 21 | 1 | 1 | 2 | 38 |
| 14 | ಗದಗ | 2 | 21 | 5 | 26 | 12 | 7 | 19 | 0 | 0 | 0 | 47 |
| 15 | ಹಾಸನ | 4 | 42 | 17 | 59 | 17 | 17 | 34 | 0 | 0 | 0 | 97 |
| 16 | ಹಾವೇರಿ | 7 | 29 | 8 | 37 | 14 | 9 | 23 | 0 | 0 | 0 | 67 |
| 17 | ಕಲಬುರಗಿ | 11 | 62 | 10 | 72 | 22 | 14 | 36 | 1 | 1 | 2 | 121 |
| 18 | ಕೊಡಗು | 1 | 10 | 7 | 17 | 2 | 2 | 4 | 0 | 0 | 0 | 22 |
| 19 | ಕೋಲಾರ | 1 | 38 | 14 | 52 | 13 | 6 | 19 | 0 | 0 | 0 | 72 |
| 20 | ಕೊಪ್ಪಳ | 1 | 26 | 7 | 33 | 11 | 7 | 18 | 0 | 0 | 0 | 52 |
| 21 | ಮಂಡ್ಯ | 0 | 33 | 13 | 46 | 11 | 11 | 22 | 0 | 0 | 0 | 68 |
| 22 | ಮೈಸೂರು | 2 | 34 | 11 | 45 | 20 | 20 | 40 | 0 | 0 | 0 | 87 |
| 23 | ರಾಯಚೂರು | 7 | 35 | 11 | 46 | 18 | 13 | 31 | 0 | 0 | 0 | 84 |
| 24 | ರಾಮನಗರ | 0 | 28 | 9 | 37 | 7 | 6 | 13 | 0 | 0 | 0 | 50 |
| 25 | ಶಿವಮೊಗ್ಗ | 2 | 35 | 14 | 49 | 15 | 15 | 30 | 0 | 0 | 0 | 81 |
| 26 | ತುಮಕೂರು | 2 | 49 | 13 | 62 | 25 | 16 | 41 | 0 | 0 | 0 | 105 |
| 27 | ಉಡುಪಿ | 0 | 9 | 6 | 15 | 4 | 4 | 8 | 0 | 0 | 0 | 23 |
| 28 | ಉತ್ತರಕನ್ನಡ | 3 | 17 | 9 | 26 | 5 | 2 | 7 | 0 | 0 | 0 | 36 |
| 29 | ವಿಜಯನಗರ | 1 | 29 | 10 | 39 | 17 | 7 | 24 | 0 | 0 | 0 | 64 |
| 30 | ವಿಜಯಪುರ | 1 | 46 | 11 | 57 | 12 | 9 | 21 | 0 | 0 | 0 | 79 |
| 31 | ಯಾದಗಿರಿ | 2 | 32 | 6 | 38 | 11 | 4 | 15 | 0 | 0 | 0 | 55 |
| | **ಒಟ್ಟು** | **67** | **917** | **298** | **1215** | **419** | **300** | **719** | **2** | **2** | **4** | **2005** |